"ನಿಮ್ಮ ವ್ಯಾಪಾರದ ಜಗಳ ಬಿಡಿಸಕ್ಕೆ ನಾವಿಲ್ಲ ಇಲ್ಲಿ... ನಮ್ಮ ಮುಂದೆ ನಿಮ್ಮ ಬೇರೆ ಕೇಸ್ ಇದೆ. ನಿಮ್ಮ ಹಣಕಾಸಿನ ವಿಚಾರ ನೀವೇ ಬಗೆಹರಿಸಿಕೊಳ್ಳಿ.''

ಮಾನಸಿಕ ಒತ್ತಡದಲ್ಲಿದ್ದ ಧನಂಜಯ ಕೂಗಿದ. ಅವನ ಆರ್ಭಟಕ್ಕೆ ನಿರ್ಮಲ್ ಭಯದಿಂದ ಅಲ್ಲಿಂದೆದ್ದು ಹೊರಟ. ಬಾಗಿಲಲ್ಲೇ ನಿಂತಿದ್ದ ರವಿ ಒಳಗಡೆ ಬಂದು, "ಸರ್... ಇವನು ಹೇಳುವುದರಲ್ಲಿ ನಿಜ ಇರಬಹುದು... ಆ ಜಯರಾಂನೇ ಅಡುಗೆಯವನನ್ನು ಪ್ಲಾಂಟ್ ಮಾಡಿ, ಹಣ ಕದಿಸುವ ಪ್ಲಾನ್ ಮಾಡಿ, ನಂತರ ಹಣ ನೀಡಿಲ್ಲ ಅಂತ ಕೇಸ್ ಹಾಕಿ ನಿರ್ಮಲ್‌ನ ನಾಶ ಮಾಡೋ ಪ್ಲಾನ್ ಇತ್ತು ಅಂತ ಅನಿಸುತ್ತದೆ. ಏನೋ ಮಿಸ್ ಆಗಿ ಆ ಅಡುಗೆಯವನನ್ನು ಸಾಯಿಸಿದ್ದಾರೆ. ಅವನನ್ನು ಅರೆಸ್ಟ್ ಮಾಡಿ ವಿಚಾರಿಸಿದರೆ ಎಲ್ಲಾ ಹೊರಬರುತ್ತದೆ."

"ಇಲ್ಲಿಯವರೆಗೂ ನಾವು ಹೀಗೆ ಆಗಿರಬಹುದು ಅಂತಾ ಯೋಚಿಸುತ್ತಿದ್ದೇವೆ ಅಷ್ಟೇ ರವಿ... ಯಾವುದಕ್ಕೂ ಒಂದು ಸಣ್ಣ ಪ್ರೂಫ್ ಆಗಲಿ, ಮೋಟಿವ್ ಆಗಲೀ ಏನೂ ಸಿಕ್ಕಿಲ್ಲ... ಮೊದಲು ಆ ಅಡುಗೆಯವನ ಫೋನ್ ಡೀಟೈಲ್ಸ್ ತರಿಸು. ಇಲ್ಲಿಯವರೆಗೂ ನಾವು ಕೊಲೆ ಮಾಡಿದವನ ಬಗ್ಗೆ ಯೋಚಿಸುತ್ತಿದ್ದೇವೆ... ಫಾರ್ ಎ ಚೇಂಜ್ ಕೊಲೆ ಆದವನ ಬಗ್ಗೆ ತಿಳಿಯೋಣ."

ಅರ್ಧ ಗಂಟೆಯಲ್ಲಿ ರವಿ ಎಲ್ಲ ವಿವರಗಳನ್ನು ತಂದ.

"ಸರ್... ಆ ನಂಬರ್ ಹತ್ತು ದಿನಗಳ ಹಿಂದೆ ತೆಗೆದುಕೊಂಡಿದ್ದು. ಆ ನಂಬರ್ ತೆಗೆದುಕೊಂಡ ಮೇಲೆ ಅವನು ನಾಲ್ಕು ನಂಬರ್‌ಗಳಿಗೆ ಕಾಲ್ ಮಾಡಿದ್ದಾನೆ. ಆ ಎಲ್ಲಾ ನಂಬರ್‌ಗಳೂ ಈಗ ಚಾಲನೆಯಲ್ಲಿ ಇಲ್ಲದ ನಂಬರ್‌ಗಳು."

ಧನಂಜಯನ ಮುಖ ಅರಳಿತು.

"ಆ ಹಳೆಯ ನಂಬರ್‌ಗಳು ಯಾರ ಬಳಿ ಇದ್ದವು ಅನ್ನೋ ಮಾಹಿತಿ ಬೇಕು... ಎಷ್ಟು ಬೇಗ ಆಗುತ್ತೋ ಅಷ್ಟು ಬೇಗ..." ಅವನ ಆತುರ ಅರ್ಥ ಆಗದ ರವಿ,

"ಸರ್ ಅದರಿಂದ ಏನು ಸಿಗುತ್ತೆ? ಯಾವುದೊ ತಪ್ಪು ನಂಬರ್ ಡಯಲ್ ಮಾಡಿರಬೇಕು. ಎಲ್ಲಾ ನಂಬರ್‌ಗಳೂ ಒಂದು ಎರಡು ನಂಬರ್ ವ್ಯತ್ಯಾಸ ಇರುವುದು. ಬಹುಶಃ ನಂಬರ್ ಮರೆತಿದ್ದು..."

ಅದಕ್ಕೆ ಉತ್ತರ ಕೊಡಲಿಲ್ಲ ಧನಂಜಯ ಅದರ ಬದಲು,

"ನಿನಗೆ ಪಾತಾಳಗರಡಿ ಅಂದರೆ ಗೊತ್ತಾ?"

ಇಲ್ಲವೆಂದು ತಲೆ ಆಡಿಸಿದ.

"ಹಿಂದಿನ ಕಾಲದಲ್ಲಿ ಬಾವಿಯಲ್ಲಿ ಕೊಡ ಮುಳುಗಿದಾಗ, ಅನೇಕ ಕೊಕ್ಕೆಗಳಿರುವ ಒಂದು ಚೈನ್ ಅನ್ನು ಬಾವಿಗೆ ಹಾಕುತ್ತಿದ್ದರು. ಅನೇಕ ಕೊಕ್ಕೆ ಇರುತ್ತಿದ್ದರಿಂದ ಯಾವುದೊ ಒಂದು ಕೊಕ್ಕೆಗೆ ಕೊಡ ಸಿಕ್ಕಿ ಹಾಕಿಕೊಳ್ಳುತ್ತಿತ್ತು. ಹಾಗಾಗಿ ಮುಳುಗಿದ್ದ ಕೊಡವನ್ನು ಸುಲಭವಾಗಿ ತೆಗೆಯುತ್ತಿದ್ದರು."

"ಅದಕ್ಕೂ ಈ ಕೇಸ್‌ಗೂ ಏನು ಸಂಬಂಧ ಸರ್?"

"ಅದರಂತೆ ಈ ಕೇಸ್‌ಗೂ ನಾವು ಪಾತಾಳಗರಡಿ ಹಾಕಬೇಕು. ಒಂದೇ ಸಮಯದಲ್ಲಿ ಅನೇಕ ಕೊಕ್ಕೆಗಳನ್ನು. ಅಂದರೆ ಅನೇಕ ಕೋನಗಳಿಂದ ನೋಡಿ ಎಲ್ಲವನ್ನು ಒಂದೇ ರಹಸ್ಯ ಹೊರತೆರೆಯಲು... ಅದೂ ಸಸ್ಪೆಕ್ಟ್‌ಗಳ ಭೂತಕಾಲಕ್ಕೆ ಹೋಗಿ. ಈಗ ನಮ್ಮ ಕಣ್ಣ ಮುಂದೆ ಕಾಣುತ್ತಿರುವುದೆಲ್ಲಾ ಕೇವಲ ಭ್ರಮೆ."

ರವಿಗೆ ಏನೂ ಅರ್ಥ ಆಗಲಿಲ್ಲ. ಆದರೆ ಎಲ್ಲಾ ಡೀಟೈಲ್ಸ್ ಕಲೆಕ್ಟ್ ಮಾಡಲು ಎರಡು ದಿನ ತೆಗೆದುಕೊಂಡ. ತನ್ನ ಮುಂದಿದ್ದ ರವಿ ಕೊಟ್ಟ ರಿಪೋರ್ಟ್, ಫೋರೆನ್ಸಿಕ್ ರಿಪೋರ್ಟ್, ಇಡೀ ಕ್ರೈಂ ಸೀನ್‌ನ ಫೋಟೊಗಳನ್ನೂ ಹರಡಿ ಕುಳಿತಿದ್ದ ಧನಂಜಯ. ಏನೋ ಮಿಸ್ಸಿಂಗ್ ಇದೆ ಅಂತ ಅನಿಸುತ್ತಿತ್ತು. ಅದೇ ಸಮಯದಲ್ಲಿ ಅವನ ಕೈಗೆ ಲಾಕರ್‌ನ ರಿಪೋರ್ಟ್ ಬಂದು ತಲುಪಿತು. ಅದನ್ನು